# ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ, ರಾಮನಗರ

ಸಂ:ರಾಚನಪ್ರಾ:ನಿ.ಹ:01:2008-09 ದಿನಾಂಕ: 28.02.2009

## ಪ್ರಕಟಣೆ

ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಜೀಗೇನಹಳ್ಳಿ (ಆರ್.ಜಿ.ಲೇಔಟ್) ವಸತಿ ಬಡಾವಣೆಯಲ್ಲಿನ ವಸತಿ ನಿವೇಶನಗಳ ಬಹಿರಂಗ ಹರಾಜು ಪ್ರಕ್ರಿಯೆಗೆ (ಅಧಿಸೂಚನೆ ಸಂಖ್ಯೆ:RCUDA/RNR/JIGENAHALLI/Res-Layout:2008-09, ದಿನಾಂಕ:27-08-2008) ಸರ್ಕಾರವು ದಿನಾಂಕ:06-10-2008ರಂದು ತಡೆಯಾಜ್ಞೆ ನೀಡಿದ್ದು, ಪತ್ರ ಸಂಖ್ಯೆ:ನಅಇ 113 ಬೆರೂಪ್ರಾ 2005, ದಿನಾಂಕ:09-01-2009ರಲ್ಲಿ ಸರ್ಕಾರವು ತಡೆಯಾಜ್ಞೆಯನ್ನು ತೆರವುಗೊಳಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ ನಿಯಮಾವಳಿಯಂತೆ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ವಿತರಿಸಲು ಹಾಗೂ ಹರಾಜು ಪ್ರಕ್ರಿಯೆಯನ್ನು ಮೂಲೆ ನಿವೇಶನಗಳಿಗೆ ಮಾತ್ರ ಸೀಮಿತಗೊಳಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಈ ಹಿಂದೆ ಪ್ರಾರಂಭಿಸಿದ್ದ ನಿವೇಶನಗಳ ಬಹಿರಂಗ ಹರಾಜನ್ನು ಪ್ರಾಧಿಕಾರವು ರದ್ದುಪಡಿಸಿ ವಸತಿ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ(ನಿವೇಶನಗಳ ಹಂಚಿಕೆ)ಗಳ ನಿಯಮ 1991ರನ್ವಯ ವಸತಿ ರಹಿತ ಸಾರ್ವಜನಿಕರಿಗೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದ್ದು, ಆಸಕ್ತರು ನಿಯಮಾನುಸಾರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

### ರಾಮನಗರದ ಜೀಗೇನಹಳ್ಳಿ (ಆರ್.ಜಿ. ಲೇಔಟ್) ವಸತಿ ಬಡಾವಣೆ

| ಕ್ರಮ ಸಂಖ್ಯೆ | ಅಳತೆ (ಮೀಟರ್ ಗಳಲ್ಲಿ) | ನಿವೇಶನಗಳ ಸಂಖ್ಯೆ | ನಿವೇಶಗಳ ದರ ಚದರ ಅಡಿಗೆ ರೂ. | ನೊಂದಣಿ ಶುಲ್ಕ ರೂ.ಗಳಲ್ಲಿ | | ಪ್ರಾರಂಭಿಕ ಠೇವಣಿ ರೂ. ಗಳಲ್ಲಿ | | ನಿವೇಶನದ ಅಂದಾಜು ಮೌಲ್ಯ ರೂ. ಗಳಲ್ಲಿ | ಪ್ರವರ್ಗವಾರು ನಿವೇಶನಗಳ ಹಂಚಿಕೆ | | | | | | | |
|---|---|---|---|---|---|---|---|---|---|---|---|---|---|---|---|---|
| | | | | ಪರಿಶಿಷ್ಟ ಜಾತಿ/ವರ್ಗ | ಇತರರು | ಪ್ರವರ್ಗ- A,B,C,I 3% | ಪ್ರವರ್ಗ- D,E,F,G 10% | | A | B | C | D | E | F | G | I |
| 1. | 6X9 | 112 | 300 | 100 | 100 | 5400 | 18000 | 1,80,000 | 2 | 3 | 17 | 5 | 11 | 5 | 67 | 2 |
| 2. | 6X12 | 45 | 300 | 100 | 100 | 7200 | 24000 | 2,40,000 | 1 | 1 | 7 | 2 | 4 | 2 | 27 | 1 |
| 3. | 9X12 | 176 | 400 | 500 | 500 | 14400 | 48000 | 4,80,000 | 3 | 5 | 27 | 8 | 17 | 8 | 105 | 3 |
| 4. | 9X15 | 117 | 400 | 500 | 500 | 18000 | 60000 | 6,00,000 | 2 | 4 | 17 | 5 | 11 | 5 | 71 | 2 |
| 5. | 12X12 | 03 | 400 | 500 | 500 | 19200 | 64000 | 6,40,000 | - | - | 01 | - | - | - | 02 | - |
| 6. | 12X18 | 71 | 500 | 600 | 600 | 36000 | 120000 | 12,00,000 | 1 | 2 | 11 | 3 | 7 | 3 | 43 | 1 |

(A) ಹಿಂದುಳಿದ ಪಂಗಡಗಳು (B) ಅನುಸೂಚಿತ ಬುಡಕಟ್ಟುಗಳು (C) ಅನುಸೂಚಿತ ಜಾತಿಗಳು (D) ಮಾಜಿ ಸೈನಿಕರು ಅಥವಾ ಮೃತ ಸೈನಿಕರ ಕುಟುಂಬದ ಸದಸ್ಯರು ಮತ್ತು ಕೇಂದ್ರ ಸಶಸ್ತ್ರ ಪಡೆಯ ಸದಸ್ಯರು (E) ರಾಜ್ಯ ಸರ್ಕಾರ/ನಿಗಮ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು (F) ಕೇಂದ್ರ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಗಳು/ ನಿಗಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು (G) ಸಾರ್ವಜನಿಕರು (I) ಅಂಗವಿಕಲರು.

***ಷರತ್ತುಗಳು:***

1. ಈ ಹಿಂದೆ ಪ್ರಾರಂಭಿಸಲಾಗಿದ್ದ ಬಹಿರಂಗ ಹರಾಜು ಪ್ರಕ್ರಿಯೆಗೂ ಹಾಗೂ ನಿವೇಶನಗಳ ಹಂಚಿಕೆ ಪ್ರಕ್ರಿಯೆಗೂ ಯಾವುದೇ ಸಂಬಂಧವಿರುವುದಿಲ್ಲ. ಈ ಹಿಂದೆ ಹರಾಜು ಪ್ರಕ್ರಿಯೆಗೆ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು ಸಹ ನಿವೇಶನಗಳ ಹಂಚಿಕೆ ಪ್ರಕ್ರಿಯೆಗೆ ಪಾಲ್ಗೊಳ್ಳಲು ಇಚ್ಚಿಸಿದಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
2. ಈ ಹಿಂದೆ ಪ್ರಾಧಿಕಾರವು ಪ್ರಾರಂಭಿಸಿದ್ದ ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುವುದರಿಂದ ಸಾರ್ವಜನಿಕರಿಂದ ಸ್ವೀಕರಿಸಲಾದ ಅರ್ಜಿ ಶುಲ್ಕದ ಮೊತ್ತವನ್ನು ಅರ್ಜಿದಾರರು ನೀಡಿರುವ ವಿಳಾಸಗಳಿಗೆ ಕ್ರಾಸ್ ಮಾಡಿದ ಬ್ಯಾಂಕ್ ಚೆಕ್ ಮೂಲಕ ಹಿಂದಿರುಗಿಸಲಾಗುವುದು.
3. ಈ ಹಿಂದೆ ಪ್ರಾಧಿಕಾರದ ಅಧಿಸೂಚನೆ ಸಂ:ರಾಚನಪ್ರಾ:ವ.ಯೋ:ನಿ.ಮಾ:2002-03 ದಿನಾಂಕ:01.07.2002 ರಂತೆ ನಿವೇಶನಗಳ ಹಂಚಿಕೆಗಾಗಿ ನೋಂದಣಿ ಮಾಡಿಕೊಂಡಿರುವವರು ಸಹ ನಿವೇಶನಗಳಿಗಾಗಿ ಮರುಅರ್ಜಿ ಸಲ್ಲಿಸಬೇಕಾಗಿರುತ್ತದೆ ಹಾಗೂ ನೋಂದಣಿ ಶುಲ್ಕದ ವ್ಯತ್ಯಾಸದ ಹಣವನ್ನು ಪ್ರಾಧಿಕಾರಕ್ಕೆ ಪಾವತಿಸಬೇಕಾಗಿರುತ್ತದೆ. (ಪುನಃ ನೋಂದಣಿ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಹಳೆ ನೋಂದಣಿ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಿಸತಕ್ಕದ್ದು.)
4. ಹಂಚಿಕೆ ಮಾಡಲು ಲಭ್ಯವಿರುವ ನಿವೇಶನಗಳ ಸಂಖ್ಯೆ, ಅಳತೆ ಮತ್ತು ಬೆಲೆಗಳು ತಾತ್ಕಾಲಿಕವಾಗಿದ್ದು, ಇವುಗಳು ವ್ಯತ್ಯಾಸವಾಗುವ ಸಾಧ್ಯತೆ ಇದೆ. ಈ ಬಗ್ಗೆ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ. ಅರ್ಜಿದಾರರು ಅದಕ್ಕೆ ಬದ್ಧರಾಗಿರತಕ್ಕದ್ದು.
5. ನಿವೇಶನಗಳ ಮಂಜುರಾತಿಯು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ(ನಿವೇಶನಗಳ ಹಂಚಿಕೆ)ನಿಯಮಗಳು 1991 ಮತ್ತು ಚಾಲ್ತಿಯಲ್ಲಿರುವ ನಿಯಮಗಳನ್ನು ಅನುಸರಿಸಿ ನಿವೇಶನಗಳನ್ನು ಮಂಜೂರು ಮಾಡಲಾಗುವುದು ಈ ನಿಯಮಗಳಿಗೆ ಮಂಜೂರಾತಿದಾರರು ಬದ್ದರಾಗಿರತಕ್ಕದ್ದು ನಿವೇಶನ ಮಂಜೂರಾಗದ ಅರ್ಜಿದಾರರುಗಳಿಗೆ ಬಡ್ಡಿ ರಹಿತವಾಗಿ ಪ್ರಾರಂಭಿಕ ಠೇವಣಿಯನ್ನು ಮಾತ್ರ ಹಿಂದಿರುಗಿಸಲಾಗುವುದು.
6. ನಿವೇಶನಕ್ಕೆ ಅರ್ಜಿಯನ್ನು ಪ್ರಾರಂಭಿಕ ಠೇವಣಿಯೊಂದಿಗೆ ಸಲ್ಲಿಸಿದ ನಂತರ ಅರ್ಜಿದಾರರು ನಿವೇಶನ ಅರ್ಜಿಯನ್ನು ರದ್ದುಗೊಳಿಸುವಂತೆ ಕೋರಿದ್ದಲ್ಲಿ ಪ್ರಾರಂಭಿಕ ಠೇವಣಿಯಲ್ಲಿನ ಶೇಕಡಾ 10ರಷ್ಟು ಮೊತ್ತವನ್ನು ಕಡಿತಗೊಳಿಸಲಾಗುವುದು.
7. ಪ್ರಾಧಿಕಾರವು ನಿಯಮಗಳನ್ನು ಅನುಸರಿಸಿ ಅರ್ಹ ಅಭ್ಯರ್ಥಿಗಳನ್ನು ಗುರುತಿಸಿ ಅವರವರ ಅವಶ್ಯಕತೆ ಮತ್ತು ಅರ್ಹತೆ ಆಧಾರದ ಮೇರೆಗೆ ನಿವೇಶನಗಳನ್ನು ಹಂಚುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಪ್ರಾಧಿಕಾರದ ಈ ಹಕ್ಕನ್ನು ಅರ್ಜಿದಾರರಾಗಲೀ ಅಥವಾ ಬೇರೆ ಯಾರೇ ಆಗಲಿ ಪ್ರಶ್ನಿಸಲು ಹಕ್ಕಿರುವುದಿಲ್ಲ. ನಿವೇಶನಗಳ ಹಂಚಿಕೆಯಲ್ಲಿ ಪ್ರಾಧಿಕಾರದ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
8. ಅರ್ಜಿದಾರರು ಸುಳ್ಳು ಮಾಹಿತಿಗಳನ್ನು ನೀಡಿ ನಿವೇಶನ ಮಂಜೂರು ಮಾಡಿಸಿಕೊಂಡಿರುವುದು ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಮಂಜೂರಾತಿಯನ್ನು ರದ್ದುಪಡಿಸಲಾಗುವುದು ಹಾಗೂ ಪ್ರಾಧಿಕಾರಕ್ಕೆ ಸಂದಾಯ ಮಾಡಲಾದ ನಿವೇಶನ ಮೌಲ್ಯದ ಶೇ. 12.5ರಷ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪ್ರಾಧಿಕಾರವು ನಿವೇಶನಗಳ ಹಂಚಿಕೆಯ ಹಕ್ಕನ್ನು ಹಾಗೂ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.

- **ಖಾಲಿ ಅರ್ಜಿಗಳನ್ನು ದಿನಾಂಕ:02-04-2009ರಿಂದ ವಿತರಿಸಲಾಗುವುದು.**
- **ಖಾಲಿ ಅರ್ಜಿಗಳನ್ನು ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ವಿಜಯಾ ಬ್ಯಾಂಕ್‌ನ ಮೈಸೂರು, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಕನಕಪುರ, ಮಾಗಡಿ, ಮತ್ತು ಬೆಂಗಳೂರಿನ ಕೆ.ಜಿ.ರಸ್ತೆ, ಎಂ.ಜಿ.ರಸ್ತೆ, ಜಯನಗರ ಮತ್ತು ಮಲ್ಲೇಶ್ವರಂನ ಶಾಖೆಗಳಲ್ಲಿ ಮಾತ್ರ ನೀಡಲಾಗುವುದು ಮತ್ತು ಸ್ವೀಕರಿಸಲಾಗುವುದು.**
- **ಅರ್ಜಿ ವಿತರಿಸುವ ಕಡೆಯ ದಿನಾಂಕ:30.04.2009**
- **ಭರ್ತಿ ಮಾಡಿದ ಅರ್ಜಿಯನ್ನು ನೊಂದಣಿ ಮತ್ತು ಪ್ರಾರಂಭಿಕ ಠೇವಣಿಯೊಂದಿಗೆ ಸಲ್ಲಿಸಲು ಕಡೆಯ ದಿನಾಂಕ:04.05.2009. ಈ ದಿನಾಂಕವು ಸರ್ಕಾರಿ/ಬ್ಯಾಂಕ್ ರಜೆ ಎಂದು ಘೋಷಿಸಿದಲ್ಲಿ ನಂತರದ ಕಾರ್ಯನಿರತ ದಿನಾಂಕವನ್ನು ಕಡೇ ದಿನಾಂಕವೆಂದು ಪರಿಗಣಿಸಲಾಗುವುದು.**

**ಕು|| ನಾಗರತ್ನ ಎಂ.ಆರ್**
ಆಯುಕ್ತರು(ಪ್ರಭಾರ)
ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ
ರಾಮನಗರ.

**ಶ್ರೀ ಎಸ್.ಆರ್.ನಾಗರಾಜ್**
ಅಧ್ಯಕ್ಷರು
ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ
ರಾಮನಗರ.

• **<u>ಸೂಚನೆ:</u>** ಮೇಲ್ಕಂಡ ಪ್ರಕಟಣೆಯಲ್ಲಿ ಅರ್ಜಿಗಳನ್ನು ವಿತರಿಸಲು ನಿಗಧಿಪಡಿಸಿದ ಕಡೆಯ ದಿನಾಂಕ 30–04–2009 ನ್ನು ದಿನಾಂಕ: 14–05–2009ರವರಗೆ ವಿಸ್ತರಿಸಲಾಗಿರುತ್ತದೆ.

1. ಭರ್ತಿ ಮಾಡಿದ ಅರ್ಜಿಯನ್ನು ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿಯೊಂದಿಗೆ ಸಲ್ಲಿಸಲು ಕಡೆಯ ದಿನಾಂಕ:16–05–2009 ಆಗಿದ್ದು ಸದರಿ ದಿನಾಂಕವು ಸರ್ಕಾರಿ/ಬ್ಯಾಂಕ್ ರಜೆ ಎಂದು ಘೋಷಿಸಿದಲ್ಲಿ ನಂತರದ ಕಾರ್ಯನಿರತ ದಿನಾಂಕವನ್ನು ಕಡೆ ದಿನಾಂಕವೆಂದು ಪರಿಗಣಿಸಲಾಗುವುದು.

2. ಖಾಲಿ ಅರ್ಜಿಗಳನ್ನು ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ವಿಜಯ ಬ್ಯಾಂಕ್ ಶಾಖೆಗಳಾದ ಬೆಂಗಳೂರಿನ ಜಯನಗರ, ಮಲ್ಲೇಶ್ವರಂ, ಮೇಹಾಲ್, ಕೆ.ಜಿ.ರಸ್ತೆ, ಎಂ.ಜಿ. ರಸ್ತೆ, ಮೈಸೂರಿನ ಮಂಡಿ ಮೊಹಲ್ಲಾ, ಮುಡಾ, ಸಯ್ಯಾಜೀರಾವ್ ರಸ್ತೆ, ಹಾಗೂ ಸಂತೇ ಪೇಟೆಗಳಲ್ಲಿ, ಮಂಡ್ಯದ ಮುಖ್ಯ ಶಾಖೆ, ವಿದ್ಯಾನಗರ, ಹಾಗೂ ಮದ್ದೂರು, ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ, ಬಿಡದಿ, ಕೆಂಗೇರಿ, ರಾಜರಾಜೇಶ್ವರಿ ನಗರ. ಶಾಖೆಗಳಲ್ಲಿ ಮಾತ್ರ ನೀಡಲಾಗುವುದು ಮತ್ತು ಸ್ವೀಕರಿಸಲಾಗುವುದು.